ಲೇಲ್ಯಾಂಡ್ ಹಾಗೂ ಟಾಟಾಛಾಸಿಗಳಿಗೆ ಸಂಸ್ಥೆಯ ಕಾರ್ಯಾಗಾರಗಳಲ್ಲಿ ಕವಚ ನಿರ್ಮಾಣಕ್ಕಾಗಿ ಮಾಡಲಾಗುತ್ತಿರುವ ಅಂದಾಜು ವೆಚ್ಚ- 3,00,000-00 ರೂಗಳು.

ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ನಿರ್ಮಿಸಲಾದ ಫ್ಲಾಟ್‌ಗಳು.

546: (3740)

ಶ್ರೀ ಎಸ್.ಸುರೇಶ್‌ಕುಮಾರ್ (ರಾಜಾಜಿನಗರ): ಮಾನ್ಯ ವಸತಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಷ್ಟ್ರೀಯ ಕ್ರೀಡೆಗಳ ಸಂದರ್ಭದಲ್ಲಿ ಬೆಂಗಳೂರಿನ ಕೋರಮಂಗಲದಲ್ಲಿ ಕಟ್ಟಿದ ಫ್ಲಾಟುಗಳ ಸಂಖ್ಯೆ ಎಷ್ಟು?

ಆ) ಅವುಗಳಲ್ಲಿ ಎಷ್ಟು ಮನೆಗಳನ್ನು ಯಾವಾಗ ಮಾರಾಟ ಮಾಡಲಾಗಿದೆ?

ಇ) ಹೀಗೆ ಮಾರಾಟ ಮಾಡಿದ್ದರಿಂದ ಗೃಹ ಮಂಡಳಿಗೆ ಬಂದ ಆದಾಯ ಎಷ್ಟು?

ಶ್ರೀ ಹೆಚ್.ಡಿ.ರೇವಣ್ಣ (ವಸತಿ ಸಚಿವರು):

ಅ) ರಾಷ್ಟ್ರೀಯ ಕ್ರೀಡೆ ಸಂದರ್ಭದಲ್ಲಿ ಬೆಂಗಳೂರಿನ ಕೋರಮಂಗಲದಲ್ಲಿ 2534 ಫ್ಲಾಟುಗಳನ್ನು ನಿರ್ಮಿಸಲಾಗಿದೆ.

ಆ) ಜನವರಿ 1996 ರಿಂದ ದಿನಾಂಕ 2-11-98ರವರೆಗೆ 1579 ಫ್ಲಾಟುಗಳನ್ನು ಹಂಚಿಕೆ ಮಾಡಲಾಗಿದೆ.

ಇ) ಹೀಗೆ ಹಂಚಿಕೆ ಮಾಡಿರುವ ಫ್ಲಾಟುಗಳಿಂದ ಈವರೆವಿಗೆ 147.20 ಕೋಟಿ ರೂಗಳು ಮಂಡಳಿಗೆ ಸಂದಾಯವಾಗಿದೆ.

ವಿದೇಶಿ ಕಂಪನಿಗಳಿಂದ ಬಿತ್ತನೆ ಬೀಜಗಳ ಪೂರೈಕೆ

547: (3817)

ಶ್ರೀ ಕೆ.ಎಸ್.ಪುಟ್ಟಣ್ಣಯ್ಯ (ಪಾಂಡವಪುರ): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ರೈತರಿಗೆ ಬಿತ್ತನೆ ಬೀಜಗಳನ್ನು ಎಷ್ಟು ವಿದೇಶಿ ಕಂಪನಿಗಳು

ಸರಬರಾಜು ಮಾಡುತ್ತಿವೆ?

ಆ) ಈ ಕಂಪನಿಗಳು ಮೊಳಕೆ ಬಾರದೆ ಇರುವ ಬೀಜಗಳನ್ನು ಸರಬರಾಜು ಮಾಡುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಇರದಿದ್ದರೆ ಇದನ್ನು ತಡೆಗಟ್ಟಲು ಸರ್ಕಾರ ಕೈಗೊಂಡ ಕ್ರಮಗಳೇನು?

ಶ್ರೀ ಸಿ.ಬೈರೇಗೌಡ (ಕೃಷಿ ಸಚಿವರು):

ಆ) ಮೆ: ಕಾರ್ಗಿಲ್ ಸಂಸ್ಥೆ ಮಾತ್ರ ನೇರವಾಗಿ ರಾಜ್ಯದಲ್ಲಿ ಬಿತ್ತನೆ ಬೀಜಗಳನ್ನು ಪೂರೈಸುವ ಏಕೈಕ ವಿದೇಶಿ ಸಂಸ್ಥೆಯಾಗಿದೆ.

ಆ) ಹೌದು.

ಇ) ಕೃಷಿ ಇಲಾಖೆಯು ರಾಜ್ಯದಲ್ಲಿ ಒಟ್ಟು 568 ಬೀಜ ಪರಿವೀಕ್ಷಕರುಗಳನ್ನು ನೇಮಕ ಮಾಡಿದ್ದು ಬಿತ್ತನೆ ಬೀಜಗಳನ್ನು, ಬಿತ್ತನೆ ಬೀಜಗಳ ಗುಣನಿಯಂತ್ರಣ ಮಾಡುವ ಸಲುವಾಗಿ ಬೀಜ ಪರಿವೀಕ್ಷಕರು, ವಿವಿಧ ಕಂಪನಿಗಳು ಉತ್ಪಾದಿಸಿ ಸರಬರಾಜು ಮಾಡಿರುವ ಬೀಜಗಳ ಮಾದರಿಯನ್ನು ತೆಗೆದು ರಾಜ್ಯ ಸರ್ಕಾರದ ಬೀಜ ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ಕಳುಹಿಸಿಕೊಡುತ್ತಾರೆ. ವಿಶ್ಲೇಷಣೆಯಲ್ಲಿ ಕಳಪೆ ದರ್ಜೆ ಬಿತ್ತನೆ ಬೀಜ ಅಥವಾ ಕಡಿಮೆ ಮೊಳಕೆ ಬಂದಿರುವ ಬಿತ್ತನೆ ಬೀಜಗಳು ಕಂಡು ಬಂದರೆ ಸಂಬಂಧಪಟ್ಟ ಸಂಸ್ಥೆಯ ಮೇಲೆ ಮತ್ತು ಮಾರಾಟಗಾರರ ಮೇಲೆ ಬೀಜ ಅಧಿನಿಯಮ 1966 ಮತ್ತು ಬೀಜ (ನಿಯಂತ್ರಣ) ಆದೇಶ 1983 ಇವುಗಳ ಪ್ರಕಾರ ಕಾನೂನು ಕ್ರಮ ಕೈಗೊಳ್ಳಲಾಗುತ್ತಿದೆ. ಅದರಂತೆ ಮೆ: ಕಾರ್ಗಿಲ್ ವಿದೇಶಿ ಕಂಪನಿಯು ಸರಬರಾಜು ಮಾಡಿದ ಸೂರ್ಯಕಾಂತಿ ಬಿತ್ತನೆ ಬೀಜವು ಕಳಪೆ ಮಟ್ಟದಾಗಿದ್ದು ಸದರಿ ಸಂಸ್ಥೆಯ ಮೇಲೆ ನ್ಯಾಯಾಲಯದಲ್ಲಿ ಮೊಕದ್ದಮೆಯನ್ನು ಹೂಡಲಾಗಿದೆ.

ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದ ಸಮೀಕ್ಷೆ.

548 (3744)

ಶ್ರೀ ಶಿವಾನಂದ ನಾಯ್ಕ (ಭಟ್ಕಳ): ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಆ) ಉತ್ತರ ಕನ್ನಡ ಜಿಲ್ಲೆಯ ಕರಾವಳಿ ಪ್ರದೇಶದಲ್ಲಿ ಸಮುದ್ರ ದಂಡೆಯಿಂದ ನಿರ್ಧಿಷ್ಟ ದೂರದಲ್ಲಿ ಕಂದಾಯ ಇಲಾಖೆ ಅಧಿಕಾರಿಗಳು ಸಮೀಕ್ಷೆ ನಡೆಸುತ್ತಿರುವುದು